
ತೆಲುಗು ಮೂಲ: ವೇಂಪಲ್ಲಿ ಷರೀಫ್
ಕನ್ನಡಕ್ಕೆ: ಎಂ.ಜಿ. ಶುಭಮಂಗಳ

# ಲೆಕ್ಕದ ನಂಟು



ಅಬ್ದುಲ್ಲಾನಿಗೆ ಏನು ಮಾಡುವುದೋ ತಿಳಿಯುತ್ತಿಲ್ಲ. ಇತ್ತ ದರಿ ಅತ್ತ ಪುಲಿ ಎನ್ನುವ ಹಾಗಿದೆ ಅವನ ಪರಿಸ್ಥಿತಿ. ನೋಡುತ್ತಿದ್ದಂತೆಯೇ ಸಮಸ್ಯೆ ಬಹಳ ದೊಡ್ಡದಾಗಿ ಕೂತಿದೆ.

ಒಂದು ಕಡೆ ಎಂಎಲ್‌ಎ ಇನ್ನೊಂದು ಕಡೆ ಮಹಿಳೆಯರು. ಇಬ್ಬರ ನಡುವೆ ಸಿಕ್ಕಿಹಾಕಿಕೊಂಡಿದ್ದಾನೆ. ಎರಡೂ ಕಡೆ ನ್ಯಾಯವಿದೆ. ಯೋಚಿಸುತ್ತಲೇ ಇದ್ದಾನೆ.

ನಿಜವಾದ ಕತೆ ಆರಂಭವಾಗಿ ವಾರವಾಗಿದೆ.

ಇದ್ದಕ್ಕಿದ್ದಂತೆ ಎಂಎಲ್‌ಎ ಕಿಟ್ಟಪ್ಪ ಅಬ್ದುಲ್ಲಾನನ್ನು ಕರೆಸಿದ.

ಅಬ್ದುಲ್ಲಾ 21ನೇ ವಾರ್ಡ್ ಕಾರ್ಪೊರೇಟರ್. ಕಾರ್ಪೊರೇಟರ್ 'ಮುಸಲ್ಮಾನ' ಇದ್ದಾನೆಂದರೆ ಆ ಏರಿಯಾದಲ್ಲಿ ಹೆಚ್ಚುಕಡಿಮೆ ಎಲ್ಲರೂ ಮುಸಲ್ಮಾನರೇ ಇರುತ್ತಾರೆಂದು ಬೇರೆ ಹೇಳಬೇಕಿಲ್ಲ.

"ಕಿಟ್ಟಪ್ಪನಿಗೆ ತನ್ನ ಬಳಿ ಏನಪ್ಪಾ ಕೆಲಸ?" ಎಂದು ಯೋಚಿಸುತ್ತಲೇ ಹೋದ ಅಬ್ದುಲ್ಲಾ.

ಆತನ ಅನುಮಾನ ನಿಜವಾಯಿತು.